ಕಥನ



**ಮೋಹನ ಕುಂಟಾರ್**

ಕಲೆ: ಮುರಳೀಧರ್ ರಾಥೋಡ್

# ಮೀನು ತಿಂದ ಗೋಪಾಲ

ಅದೊಂದು ಸೋಮವಾರ. ಗಣಿತದ ಮೇಷ್ಟ್ರು ತರಗತಿಗೆ ಬಂದವರೇ ಮೂಗಿನ ಹೊಳ್ಳೆ ಅರಳಿಸಿ ಸುತ್ತಲೂ ಪರಿಶೀಲಿಸಿದರು. 'ಏನು ವಾಸನೆ, ಏನು ವಾಸನೆ?, ಏನೋ ವಾಸನೆ ಬರುತ್ತಿದೆಯಲ್ಲ' ಎಂದು ಪದೇಪದೇ ಹೇಳಿದರು.

ವಿದ್ಯಾರ್ಥಿಗಳ್ಯಾರೂ ಪ್ರತಿಕ್ರಿಯಿಸಲಿಲ್ಲ. ನೇರವಾಗಿ ಒಬ್ಬೊಬ್ಬ ವಿದ್ಯಾರ್ಥಿಯನ್ನು ಮೇಷ್ಟ್ರು ಕೇಳಿದರು. 'ನಿನಗೆ ವಾಸನೆ ಬರುವುದಿಲ್ಲವೇ?', ಒಂದಿಬ್ಬರು 'ಹೌದು ಬರುತ್ತಿದೆ' ಎಂದರು.

ಮತ್ತೊಂದಿಬ್ಬರು `ಇಲ್ಲ' ಎಂದರು. ಮೇಷ್ಟ್ರ ಆವೇಶ ಜೋರಾಯಿತು. ಮೇಷ್ಟ್ರು ಪ್ರತಿಯೊಬ್ಬ ವಿದ್ಯಾರ್ಥಿಯ ಸಮೀಪಕ್ಕೆ ಹೋಗಿ ಆಘ್ರಾಣಿಸಿ ನೋಡಿದರು.

'ಹೌದು ವಾಸನೆ ಬರುತ್ತಿದೆ'. 'ಯಾರು ಸ್ನಾನ ಮಾಡದೇ ಬಂದವರು?' ಎಂದು ಕೇಳಿದರು.

ಯಾರೂ ತುಟಿ ಪಿಟಕ್ಕೆನ್ನಲಿಲ್ಲ. ಬೆಳಗ್ಗೆ ಶಾಲೆಗೆ ಸ್ನಾನ ಮಾಡಿ ಬರುವುದನ್ನು ಆ ಹಳ್ಳಿಯಲ್ಲಿ ಶೂದ್ರ ಮಕ್ಕಳ್ಯಾರೂ ರೂಢಿಸಿಕೊಂಡಿರಲಿಲ್ಲ. ತರಗತಿಯಲ್ಲಿ ಮೂರ್‍ನಾಲ್ಕು ಬ್ರಾಹ್ಮಣ ಹುಡುಗರನ್ನು ಬಿಟ್ಟರೆ ಉಳಿದವರೆಲ್ಲರೂ ಶೂದ್ರ ಜಾತಿಯವರೇ. ಈ ವಾಸ್ತವ ಗೊತ್ತಿದ್ದೂ ಮೇಷ್ಟ್ರು ತಪಾಸಣೆಗೆ ತೊಡಗಿದರು.

'ಯಾರು ಮೀನು ತಿಂದು ಬಂದಿದ್ದೀರಿ?' ಎಂದು ಮೇಷ್ಟ್ರು ಪ್ರಶ್ನಿಸತೊಡಗಿದರು. ಮೀನು ತಿಂದವರು ಯಾರಾದರೂ ಇದ್ದರೋ, ಇಲ್ಲವೋ? ತಿಳಿಯದು. ಆದರೆ ಯಾರೂ 'ತಿಂದಿದ್ದೇವೆ' ಎಂದು ಹೇಳಲಿಲ್ಲ.

ಮೀನು ತಿಂದು ಶಾಲೆಗೆ ಬರುವುದು ಅಪರಾಧ ಎಂಬ ವಾತಾವರಣವಿದ್ದ ಶಾಲೆಯದು. ಬ್ರಾಹ್ಮಣೇತರ ಮಕ್ಕಳೆಲ್ಲರೂ ಮೀನು ತಿನ್ನುವವರು ಎಂಬುದು ಗೊತ್ತಿದ್ದರೂ ಶಾಲೆಯಲ್ಲಿ 'ಮೀನು-ಮಾಂಸ ತಿಂದು ತರಗತಿಗೆ ಬರಬಾರದು' ಎಂಬ ಅಲಿಖಿತ ಒಪ್ಪಂದವಿದ್ದಂತಿತ್ತು. ಬ್ರಾಹ್ಮಣರೇ ಮೇಷ್ಟ್ರುಗಳಾಗಿದ್ದ ಆ ಶಾಲೆಗೆ ಸೇರಿದ ಮೇಲೆ ಪ್ರತಿಯೊಬ್ಬರೂ ಸಸ್ಯಾಹಾರಿಗಳಾಗಿ ಬದಲಾಗುತ್ತಿದ್ದರು. ಬ್ರಾಹ್ಮಣ ಮೇಷ್ಟ್ರುಗಳ ಕೆಂಗಣ್ಣಿಗೆ ಗುರಿಯಾಗಬಾರದೆಂದು ಅನೇಕ ವಿದ್ಯಾರ್ಥಿಗಳು ಮೀನು, ಮಾಂಸ ವರ್ಜ್ಯ ಮಾಡಿ ಬರುತ್ತಿದ್ದರು. ಬ್ರಾಹ್ಮಣರ ಮಕ್ಕಳ ಜೊತೆ ಸ್ನೇಹ ಮಾಡಬೇಕಾದರೆ ತಾನು ಸಸ್ಯಾಹಾರಿ ಎಂದು ಘೋಷಿಸಿಕೊಳ್ಳಬೇಕಾಗಿತ್ತು. ಘೋಷಿಸುವಲ್ಲಿಗೆ ಮಾತ್ರ ಶೂದ್ರ ಮಕ್ಕಳು ಸೀಮಿತವಾಗಿ ಉಳಿಯುತ್ತಿರಲಿಲ್ಲ. ಪ್ರಾಮಾಣಿಕವಾಗಿ ತಾವು ಸಸ್ಯಾಹಾರಿಗಳಾಗಿಯೇ ಬದಲಾಗುತ್ತಿದ್ದರು. ಇಂತಹ ವಾತಾವರಣವಿರುವ